೦೪–೦೪–೨೦೦೦

# AJJA'S TALKS AT MANJU'S HOUSE, BANGALORE

ಅಜ್ಜ – ಇಲ್ಲಿ ಕರ್ತೃಸ್ಥಾನವಿಲ್ಲ, ಸಂಕಲ್ಪವಿಲ್ಲ, ಕರ್ಮ ಮಾಡಿಯೂ ಮಾಡದ ಸ್ಥಿತಿ. ಕರ್ಮ ಮಾಡಬೇಕಾದ್ರೆ ಕರ್ತೃತ್ವ ಬೇಕು, ಸಂಕಲ್ಪ ಬೇಕು. ನಾನು ಇಂಥವನು ಎಂಬ ಸಂಕಲ್ಪ.

ಒಬ್ಬರು – ಹಾಗಾದ್ರೆ ಅಲ್ಲಿ ಏನಿರುತ್ತೆ ಅಜ್ಜ?

ಅಜ್ಜ – ಏನೂಂತ ಹೇಳೋದು ನೋಡಿ. ಅಲ್ಲಿ ಏನಿರುತ್ತೆಂತ ಹೇಳುವವನೇ ಇಲ್ಲ. ಅದಲ್ವಾ ಇರೋದು. ಹ. ಹ. ಹ. ಧ್ಯಾನ ಮಾಡುವವನೂ ಇಲ್ಲ, ಮಾಡಲ್ಪಡುವವನೂ ಇಲ್ಲ. ಧ್ಯಾನವೂ ಇಲ್ಲ.

ಒಬ್ಬರು – ತ್ರಿಪುಟಿಯನ್ನ ಮೀರಿದ್ದು.

ಅಜ್ಜ – ಆ ಆ ಆ ಶಬ್ದ ಬರ್ಬೇಕು. ಏನು ತ್ರಿಪುಟಿಯನ್ನ ಮೀರಿದ್ದು. ಅದು ಯಾವುದು?

ಒಬ್ಬರು – ಅದನ್ನು ಏನೂಂತ ಹೇಳೋದು.

ಅಜ್ಜ – ಹ. ಹ. ಹ. ಹ. ನೋಡು ಶಾಂತ ಇತ್ಲಾಗೆ ನೋಡಪ್ಪಾ. ತ್ರಿಪುಟಿಯನ್ನು ಮೀರಿದ್ದೂಂತ್ಹೇಳಿ. ಅದು ಸರಿ ಅಂತಿಮ ಸ್ಥಿತಿ ಅದು. ಅಂದರೆ ಸ್ಥಿತಿಯಿಲ್ಲದ ಸ್ಥಿತಿ. ಸ್ಥಿತಿ ಇದ್ರೆ, ಅದಕ್ಕೆ ನಾಶ ಉಂಟು. ಸ್ಥಿತಿಯಿಲ್ಲದ ಸ್ಥಿತಿ. ಅಲ್ಲಿ ಸ್ಥಿತಿ ಇಲ್ಲ. ಆದರೆ ಇದೆ. ಹ. ಹ. ಹ. ಅಂಥಾದ್ದಕ್ಕೆ ಆನಂದಮಯ ಜೀವನಾಂತ ಹೇಳ್ತಾರೆ. ಕರ್ಮದಿಂದ ಪರಿವರ್ತನೆ ಹೊಂದಿ, ಜ್ಞಾನದಿಂದ ವಿಕಾಸ ಹೊಂದಿದಾಗ ಆಯ್ತು.

ಒಬ್ಬರು – ಪರಿವರ್ತನೆ ಹೊಂದುವವರೆಗೂ ಬೇರೆ ಬೇರೆಯೇ ವಿಕಾಸ ಆಗೋವರೆಗೂ ಬೇರೆ ಬೇರೆಯೇ. ಅಂದ್ರೆ, ಅಲ್ಲೀವರೆಗೂ ದ್ವೈತ ಭಾವನೆ. ನಾನು ಬೇರೆ, ಪರಮಾತ್ಮ ಬೇರೆ, ವಿಕಾಸ ಆಗೋವರೆಗೂ. ವಿಕಾಸ ಆದ ನಂತರ ಎರಡೂ ಒಂದೆ.

ಅಜ್ಜ – ನೋಡಿ. ಧ್ಯಾನ ಮಾಡುವವನು ಜೀವಾತ್ಮ. ಯಾರನ್ನು? ಪರಮಾತ್ಮನನ್ನು ಧ್ಯಾನ ಮಾಡುತ್ತಾ ಮಾಡುತ್ತಾ ಇವನು ಅವನ ಹಾಗೇ ಆದ. ಅವನು ಅಸ್ತಿತ್ತ್ವವನ್ನು ಕಳಕೊಂಡಾಗ ಈ ಜೀವಾತ್ಮನೂ ಇಲ್ಲ, ಅದೂ ಇಲ್ಲ. ಆತ್ಮ ಒಂದೇ ಇರುವಂಥಾದ್ದು.

ಒಬ್ಬರು – ಜೀವಾತ್ಮನು ಅಸ್ತಿತ್ತ್ವ ಕಳಕೊಳ್ಳಬೇಕು.

ಅಜ್ಜ – ಹೌದು. ಹೇಗೆ? ಪರಿವರ್ತನೆ ಹೊಂದಿದಾಗ, ಏನಾದ ಅವ?

ಒಬ್ಬರು – ಕರಗಿ ಹೋದ, ಕರಗಿ ಹೋಗಿ ಪರಮಾತ್ಮನಲ್ಲಿ ಐಕ್ಯ ಆಗ್ತಾನೆ.

ಅಜ್ಜ – ಹಾಗಿಲ್ಲ ಅಲ್ಲಿ. ತಾನು ಯಾರು ಎಂಬುದಾಗಿ ತನ್ನನ್ನು ತಾನು ಅರಿಯುವಂಥದ್ದು. ಅದು ಈ ನಾನುವಿಗೆ ಆಗೋದಿಲ್ಲ. ದೇಹವೇ ನಾನು ಎಂಬುದಾಗಿ ಉಂಟಲ್ಲ. ಒಂದು ನಾನು. ಅದು ತನ್ನನ್ನು ತಾನು ತಿಳಿಯಲಿಕ್ಕಾಗದು. ಆ ಮೂಲ ನಾನು ಉಂಟಲ್ಲ. ಅದು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ಆತ್ಮವೇ ಆಯಿತು. ಮೂಲ ನಾನು ಯಾವುದು? ಮೂಲ ಪ್ರಕೃತಿ ಯಾವುದದು. ಅವನನ್ನು ಜಗತ್ತಿನಲ್ಲಿ ಏನಂತ ಕರೀತಾರೆ?

ಒಬ್ಬರು – ಆತ್ಮ ಅಂತ ಕರೀತಾರೆ.

ಅಜ್ಜ – ಇಲ್ಲ ಆತ್ಮ ಆಚೆಗೆ.

ಒಬ್ಬರು – ಅಹಂಕಾರ ಅಂತ ಹೇಳ್ಬೋದ.

ಅಜ್ಜ – ಹ. ಹ. ಮಾಡಲ್ಪಡುವವನು ಯಾರು? ಪರಮಾತ್ಮ. ಇವನು ಹಾಗೇ ಆದರೂ ಜೀವಾತ್ಮ. ಅವನು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ . . . . .

ಒಬ್ಬರು – ಎರಡು ಒಂದೇ ಆಯ್ತು.

ಅಜ್ಜ – ಇಲ್ಲಾ ಅಸ್ತಿತ್ತ್ವಕ್ಕೆ ಹೋಯ್ತದು.

ಒಬ್ಬರು – ಎರಡೂ ಅಸ್ತಿತ್ತ್ವ ಹೋಯ್ತು.

ಅಜ್ಜ – ಮತ್ತೆ ಹೋಗದೆ ಉಪಾಯ ಇಲ್ಲ. ತನ್ನ ಅಸ್ತಿತ್ತ್ವವನ್ನು ಕಳಕೊಳ್ಳಬೇಕಲ್ಲ ಆತ್ಮ ವಿಚಾರಕ್ಕೆ ಹೋಗಲಿಕ್ಕೆ.

ಒಬ್ಬರು – ಅಂದ್ರೆ ಜೀವಾತ್ಮನು ತನ್ನ ಅಸ್ತಿತ್ತ್ವವನ್ನು ಕಳಕೊಂಡು, ಪರಮಾತ್ಮನೂ ಕೂಡ

ಅಜ್ಜ – ಜೀವಾತ್ಮನು ಪರಮಾತ್ಮನ ಹಾಗೆ ಆದ ಧ್ಯಾನದಿಂದ. ಅವನು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ಆತ್ಮ ಮಾತ್ರ. ಹಾಗಾದ್ರೆ ಪರಮಾತ್ಮನೂ ಕೂಡ ಒಂದಲ್ಲ ಒಂದು ದಿನ ಹಾಗೆ ತನ್ನ ಅಸ್ತಿತ್ತ್ವವನ್ನು ಕಳಕೊಳ್ಳಲೇ ಬೇಕು. ಅದು ಹೇಗೆ ಹೇಳ್ತದೆ ಶಾಸ್ತ್ರ ಸಿದ್ಧಾಂತ ಪ್ರಕಾರ ಹೇಳಿ.

ಒಬ್ಬರು – ನಾವು ಓದಿಲ್ಲ ಅಜ್ಜ, ಕೇಳಿದ್ದು.

ಅಜ್ಜ – ಅಷ್ಟೇ ಸಾಕು ಹೇಳಿ. ಹ. ಹ.

ಒಬ್ಬರು – ಎಲ್ಲ ಒಟ್ಟಿಗೆ ಒಂದಾಗಿಬಿಡ್ತದೆ ಅಂತ.

ಅಜ್ಜ – ಅಂದ್ರೆ ಐಕ್ಯ ಆಗಿ ಬಿಡ್ತದೆ ಅಂತ್ಹೇಳಿ.

ಒಬ್ಬರು – ಹೌದು ಐಕ್ಯ ಆಗಿ ಬಿಡ್ತದೆ. ತನ್ನ ತನವನ್ನು ಕಳಕೊಂಡಾಗ . . . .

ಅಜ್ಜ – ತನ್ನ ತನವನ್ನು ಕಳಕೊಳ್ಳುವಂಥಾದ್ದೇ ಇರೋದು. ಅಂದ್ರೆ ತನ್ನ ಅಂದ್ರೆ ನಾನು ಅಂದ್ರೆ ಯಾರೂಂತ್ಹೇಳಿ.

ಒಬ್ಬರು – ಅದೇ ನೀವು ಹೇಳಿದ್ರಲ್ಲ. ದೇಹಭಾವದ ನಾನು.

ಅಜ್ಜ – ಆ ವಿಚಾರ ಆಗೋದಿಲ್ಲ. ದೇಹ ಭಾವದ ನಾನುವನ್ನು ಬಿಟ್ಟುಬಿಡಿ. ಇನ್ನೊಂದು ಎರಡನೇದು. ಸೋಽಹಂ ಭಾವನೆ. ಆ ಸೋಽಹಂ ಭಾವನೆ ಈಗ ನೋಡಬೇಕಾದ್ದು. ಅಹಂ ಬ್ರಹ್ಮಾಸ್ಮಿ ಅನ್ನುವಲ್ಲಿ ಅಹಂ ಉಂಟು. ನಾನು ಬ್ರಹ್ಮವೇ ಆಗಿದ್ದೇನೆ ಅಂತ. ಆಂ. ಅವನು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ಅಂದ್ರೆ, ಆ ನಾನು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ, ಅಲ್ಲಿ ನಾನು ಅಂದ್ರೆ ಒಂದು ಶಕ್ತಿ ಅಂತ. ಅದು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ಅದುವೇ ಆಯಿತು. ಅದು ಆಗಿದ್ದೇನೆ ಅಂತ ಹೇಳ್ಲಿಕ್ಕೆ ಇವನ ಅಸ್ತಿತ್ತ್ವ ಹೋಯ್ತು. ಅದೇ ವಿಶ್ವಾತೀತವಾದ್ದು. ಜಗತ್ತಿಗೆ ಆಧಾರ ಸ್ವರೂಪವಾದ್ದು.

ಒಬ್ಬರು – ಅದು ಕೊನೆ. ಅಲ್ಲಿಂದ ಮೇಲೇನಿಲ್ಲ.

ಅಜ್ಜ – ಆಂ. ಇಲ್ಲ. ಅಲ್ಲಿಂದ ಮೇಲೆ ಇಲ್ಲ.

ಒಬ್ಬರು – ಯಾವ ಮಾರ್ಗದಲ್ಲಿ ಅಲ್ಲಿ ಹೋಗ್ಬಹುದು.

ಅಜ್ಜ – ಕರ್ಮ ಮಾರ್ಗದಿಂದ ಪ್ರಾರಂಭ ಮಾಡ್ಬೇಕು. ಕರ್ಮದಿಂದ ಪರಿವರ್ತನೆ, ಜ್ಞಾನದಿಂದ ವಿಕಾಸ. ಒಂದಾಗದೆ ಒಂದು ಸಾಧ್ಯವಿಲ್ಲ. ಮೊದಲು ಕರ್ಮದಿಂದ ಪರಿವರ್ತನೆ, ಆಮೇಲೆ ಆತ್ಮ ವಿಚಾರಕ್ಕೆ ಹೋಗ್ಲಿಕ್ಕೆ ಅವನ ಅನುಗ್ರಹ ಸಿಕ್ತದೆ. ಅವನ ಅನುಗ್ರಹದಿಂದ ಇವ ಆತ್ಮವಿಚಾರಕ್ಕೆ ಹೋಕ್ತಾನೆ. ನೋಡಿ, 'ಅಸತೋಮಾ ಸದ್ಗಮಯ'. ಅಸತ್ಯದಿಂದ ನನ್ನನ್ನು ಸತ್ಯದ ಕಡೆಗೆ ಕೊಂಡು ಹೋಗು. ಪರಮಾತ್ಮನನ್ನು ಇವನು, ಅಂದ್ರೆ ಹೋಗುವವನು ಜೀವಾತ್ಮ, ಇವನು ಅವನನ್ನು ಪ್ರಾರ್ಥಿಸ್ತಾನೆ. ಅವನು ಕೊಂಡೋಗಬೇಕು. ದಾರಿ ತೋರಿಸ್ಬೇಕು. ಹಾಗಾದ್ರೆ ಇವನು ಅಂದ್ರೆ ಪರಮಾತ್ಮ ಮಧ್ಯಮವರ್ತಿ ಆಯ್ತು. ಆದ್ರೆ ಅಂತಿಮ ಸ್ಥಿತಿ ಅದೆ. ಆದ್ರೆ ಪ್ರಪಂಚಕ್ಕೆ ಪರಮಾತ್ಮ ಸತ್ಯ. ಪ್ರಪಂಚ ಎಷ್ಟು ಸತ್ಯವೋ ಅಷ್ಟೇ ಸತ್ಯ ಪರಮಾತ್ಮ. ಮುಂದೆ ಹೋಗುವಾಗ . . . .

ಒಬ್ಬರು – ಅದೊಂದೇ ಸತ್ಯ.

ಅಜ್ಜ – ಹೌದು. ಬಾಕಿದ್ದೆಲ್ಲ ಹೋಕ್ತದೆ. ಅಂದ್ರೆ ಆತ್ಮನಿಗೆ ಮಾಯೆಯ ಆವರಣದ ಉಪಾಧಿ ಉಂಟಾದಾಗ ಅವನೇ ಪರಮಾತ್ಮ ಅನ್ನಿಸಿಕೊಳ್ತಾನೆ. ಅಂದ್ರೆ ಆ ಆವರಣವನ್ನು ಕಳಚಿಕೊಂಡಾಗ ಮಾತ್ರ.

ಒಬ್ಬರು – ಮಠಾಕಾಶ, ಘಟಾಕಾಶ ಅಂತ ಹೇಳ್ತಾರಲ್ಲ.

ಅಜ್ಜ – ಎರಡು ಒಂದೇ.

ಒಬ್ಬರು – ಆ ಉದಾಹರಣೆ ಕೊಟ್ಟದ್ದು. ಘಟ ಹೊಡೆದು ಹೋದ್ರೆ ಮಠಾಕಾಶ ಉಳಿತದೆ.

ಅಜ್ಜ – ಹ್ಞಂ. ಹೌದು. ಆ ಘಟ ಈಗ ಯಾವ್ದು?

ಶಾಂತ – ಅಲ್ಲಾ ಘಟಾಕಾಶ, ಮಠಾಕಾಶದಲ್ಲಿ ಘಟವನ್ನು ಹೋಡೀಬೇಕು. ಮಠವನ್ನು ಹೊಡೀಬೇಕು ಅಂತ ಅಜ್ಜ ಹೇಳ್ತಾ ಇರೋದು. ಆಗ ಉಳಿಯುವುದು ಆಕಾಶ ಮಾತ್ರ ಅಲ್ವಾ.

ಒಬ್ಬರು – ಎರಡೂ ಬೇರೆಯೇ, ಹ. ಹ.

ಶಾಂತ – ಘಟವು ಹೇಗೆ ಒಂದು ಉಪಾಧಿಯೋ, ಮಠ ಅನ್ನೋದು ಒಂದು ಉಪಾಧಿಯೇ.

ಒಬ್ಬರು – ಮಠಾಕಾಶ ಸೀಮಿತ ಅಲ್ವಲ್ಲಾ. ಅದು ಅಪರಿಮಿತ.

ಶಾಂತ – ಅಪರಿಮಿತ ಆದ್ರೂ ಅದು ಉಪಾಧಿಯೇ ಅಲ್ವಾ. ಘಟದ ಸಾಪೇಕ್ಷದಿಂದ ಅದು ಅಪರಿಮಿತ ಅನ್ನಿಸ್ತದೆ. ಆದ್ರೆ ಮಹಾಕಾಶದ ಅಪೇಕ್ಷೆಯಿಂದ ಅದೂ ಸೀಮಿತವೇ ಅಲ್ವಾ. ಮಠವನ್ನು ಹೊಡೀಬೋದಲ್ವಾ. ಆದ್ರೆ ಆಕಾಶವನ್ನು ಏನೂ ಮಾಡ್ಲಿಕ್ಕೆ ಬರೋದಿಲ್ಲ.

ಅಜ್ಜ – ಉಪಾಧಿಯನ್ನು ಹೊಡಿಲೇ ಬೇಕು.

ಒಬ್ಬರು – ಮೊನ್ನೆ ಒಬ್ಬರು ಸ್ವಾಮಿಗಳು ಮಾತಾಡ್ತಾ ಹೇಳಿದ್ರು. ಕೈವಲ್ಯಾನಂದ್ರು ಅಂತ ಒಂದು ಮಡಿಕೆ ಉದಾಹರಣೆ ಕೊಟ್ರು. ನಿಮ್ಮ ಕೈಯಲ್ಲಿ ಈಗ ಒಂದು ಮಡಿಕೆ ಇದೆ. ಆ ಮಡಿಕೆ ಹಿಡಿದುಕೊಂಡಿದೀರಿ. ಅದು ಜಾರಿ ಬಿದ್ದು ಒಡೆದು ಹೋಯ್ತು. ಮಡಿಕೆ ಯಾವುದ್ರಿಂದ ಆಗಿದೆ. ಮಣ್ಣಿನಿಂದ ಆಗಿದೆ. ಮಡಿಕೆ ಇದೆ. ಆಮೇಲೆ ಒಡೆದಿದೆ. ಚೂರು ಉಳಿದಿದೆ. ಚೂರುಗಳು ಇದೆ. ಆ ಮೇಲೆ ಆ ಚೂರುಗಳನ್ನ ರಸ್ತೆ ಮೇಲೆ ಹಾಕಿದ್ರು. ಅದರ ಮೇಲೆ ಬಸ್ಸು ಹೋಯಿತು. ಅದು ಪುಡಿ ಪುಡಿ ಆಯ್ತು. ಆಗ ಆ ಮಡಿಕೆಯ ಪುಡಿ ಇದೆ. ಆಮೇಲೆ ರಾತ್ರಿ ಮಳೆ ಬಂತು. ಅದರ ಮೇಲೆ ನೀರು ಬಿದ್ದು ಅದು ಕೆಸರಾಯ್ತು. ಆ ಕೆಸರು ಇದೆ. ಸೋ. ಮಡಿಕೆ ಇದೆ, ಮಡಿಕೆ ಚೂರುಗಳು ಇದೆ, ಪುಡಿ ಇದೆ, ಕೆಸರು ಇದೆ. ಒಟ್ಟಿನಲ್ಲಿ ಈ ಇದೆ ಅನ್ನತಕ್ಕಂಥದ್ದೆಲ್ಲ ಇದೆ. ಉಳಿದದ್ದೆಲ್ಲ ವ್ಯತ್ಯಾಸಗಳು.

ಅಜ್ಜ – ಅವರು ಅದ್ವೈತಿಗಳ.

ಒಬ್ಬರು – ಹೌದು. ಅದ್ವೈತಿಗಳು. ಹ. ಹ. ವೇದಾಂತದಲ್ಲಿ ಹೀಗಿದೆಯಂತೆ. ಇದೆ ಅನ್ನುವಂಥಾದ್ದು ಸತ್ಯ. ಉಳಿದದ್ದೆಲ್ಲ ಬದಲಾವಣೆ ಉಳ್ಳದ್ದು ಮಿಥ್ಯ ಅಂತ ಹೇಳ್ತಾರೆ.

ಅಜ್ಜ – ಅದೇ ನಾಮರೂಪ ರಹಿತವಾದದ್ದೊಂದುಂಟು. ಅದು ಯಾವುದು? ಆಂ.

ಶಾಂತ – ಆತ್ಮ.

ಅಜ್ಜ – ಹಾಂ. ಅದು ನಮಗೆ ಬೇಕಾದ್ದು. ಘಟ ಎಂಬುದು ಕಾರಣ ದೇಹಕ್ಕೆ. ಅನ್ವಯಿಸಬಹುದೋ.

ಒಬ್ಬರು – ಹೌದು.

ಅಜ್ಜ – ಹಾ. ಅದು ಬರ್ಬೇಕು ಈಗ. ಅದು ಬರೋದಿಲ್ಲ ಯಾರಿಂದ್ಲು.

ಶಾಂತ – ಅಜ್ಜ, ಇಲ್ಲಿ ಘಟ, ಮಠ ಅಂತ ಹೇಳಿದ್ರೆ, 'ಸಮಸ್ತ ನಾಮರೂಪಾತ್ಮಕಜಗತ್' ಅಂತ ಅರ್ಥ ಬರ್ತದೆ.

ಅಜ್ಜ – ಹೌದು. ಅಲ್ಲಿಂದ್ಲೆ ಪ್ರಾರಂಭ ಆಯಿತಲ್ವಾ. ಕಾರಣ ದೇಹದಿಂದ ಪ್ರಾರಂಭ ಆಯಿತಲ್ವಾ. ಜಗತ್ತು ಆತ್ಮನಿಗೆ ಆವರಣ ರೂಪವಾಗಿ ಮಾಯೆ ಇರುವಂಥಾದ್ದು. ಅದನ್ನು ಕಾರಣದೇಹ ಅಂತ ಹೇಳಬಹುದು.

ಶಾಂತ – ಅದೆಲ್ಲವೂ ಸೇರಿ ಪ್ರಪಂಚ ಅಂತ ತೆಗೋಬೇಕು.

ಅಜ್ಜ – ಹೌದು ಅದೆಲ್ಲ ಈಚೆಗೆ ಆಯ್ತು. ಕಾರಣದೇಹದಿಂದ ಆಚೆಗೆ ಯಾವುದೂ ಅಂತ್ಹೇಳಿ.

ಶಾಂತ – ಅದು ಆತ್ಮತತ್ತ್ವ ಮಾತ್ರ.

ಅಜ್ಜ – ಹಾಂ. ಹೌದು. ಅದು ಆತ್ಮತತ್ತ್ವ ಮಾತ್ರ. ಅದಕ್ಕೆ ಒಂದು ಮಾಯೆಯ ಆವರಣ ಬಿದ್ದಾಗ ಆ ಜಡವಾದ ಮಾಯೆಗೆ ಅದು ಚೇತನ ಅಲ್ಲ. ಆತ್ಮನ ಇರುವಿಕೆಯಿಂದ ಈ ಮಾಯೆಗೆ ಚೈತನ್ಯ ಬಂತು. ಈ ಮಾಯೆಯಿಂದಾಗೆ ಇದಕ್ಕೆಲ್ಲ ಒಟ್ಟು ಚೇತನ ಬಂತು. ಹಾಂ. ಹೌದಲ್ಲ. ಕಾರಣ ದೇಹ ಸ್ಫೋಟವಾದಾಗ, ಹ. ವಸ್ತುಸ್ಥಿತಿ ಬೇರೆಯೇ ಉಂಟು. ಅನುಭವ ಅನ್ನೋದು ಬೇರೆಯೇ ಉಂಟು. ಈ ಮಾಯೆ ಕಾಣಿಸಿಕೊಂಡದ್ದು. ಅದು ಮೂಲತಃ ಇದೇ ಅಂತ ಹೇಳ್ಲಿಕ್ಕೆ ಬರೋದಿಲ್ಲ. ವ್ಯವಹಾರದಲ್ಲಿ ಇದೆ ಅಂತ ಹೇಳಬಹುದು. ಪರಮಾರ್ಥದಲ್ಲಿ ಅದನ್ನ ಇದೆ ಅಂತ ಹೇಳಲಿಕ್ಕೆ ಸಾಧ್ಯವಿಲ್ಲ. ಆಂ. ಇದ್ರೆ ಅದು ಏನಾಯ್ತು. ಹಾಗಾದ್ರೆ ಇದ್ರೆ ಏನಾಯಿತು. ಅಲ್ವಾ.

ಒಬ್ಬರು – ಯದೃಷ್ಟಂ ತನ್ನಷ್ಟಂ

ಅಜ್ಜ – ಅಂದ್ರೆ.

ಒಬ್ಬರು – ಯಾವುದು ಕಾಣಲ್ಪಡುತ್ತವೆಯೋ ಅದು ನಾಶವಾಕ್ತದೆ ಅಂತ.

ಅಜ್ಜ – ಹೌದು ಹಾಗಾದ್ರೆ ಅದಕ್ಕೆ ಆಧಾರ ಇದೆ ಅಂತ ಆಯ್ತು. ನಮ್ಮ ವಿಮರ್ಶೆ ಇರೋದು ಹೆಚ್ಚಿಗೆ ಇಲ್ಲಿ ಈಗ. ಕಾರಣ ದೇಹದಲ್ಲೇ ಇರುವಂಥಾದ್ದು. ಉದಾಹರಣೆ ಎಲ್ಲ ಕೊಡಬಹುದು. ಆದರೆ ಸ್ವತಃ ಅನುಭವಕ್ಕೆ ಬರುವಾಗ ಅಲ್ಲಿ ಕಾರಣದೇಹ . . . . . ಅಂಥವನು ಉಪನ್ಯಾಸ ಮಾಡುವಾಗ ಯಾರು ಉಪನ್ಯಾಸ ಮಾಡಿದ್ದು ಅಂತ ಹೇಳ್ತಾನೆ ಅವ.

ಒಬ್ಬರು – ನಾನು ಅಂತ ಹೇಳ್ತಾನೆ.

ಅಜ್ಜ – ಹಾ. ನೋಡಿ ಅವ ಉಪನ್ಯಾಸಕ್ಕೆ ಇಡೀ ಪೆಟ್ಟು ಅಲ್ಲಿ ಬಿತ್ತು. ಅದು ಅನುಕರಣೆ ಆಯ್ತು ಆ ಉಪನ್ಯಾಸ. ಅನುಕರಣೆ ಅಂದ್ರೆ ಹೀಗೆ ಶಾಸ್ತ್ರದಲ್ಲಿ ಹೇಳ್ತದೆ, ಕೃಷ್ಣನು ಹೀಗೆ ಹೇಳಿದ್ದಾನೆ.

ಒಬ್ಬರು – ಅನುಭೂತಿ ಅಲ್ಲ.

ಅಜ್ಜ – ಅದೇ ಸ್ವಾನುಭವಕ್ಕೂ ಅನುಕರಣೆಗೂ ವ್ಯತ್ಯಾಸ ಉಂಟು. ನೋಡಿ. ಮಾತುಗಳು ಇಲ್ಲಿಂದ ಬರ್ತದೆ ಅಂತ ಅವ ಹೇಳ್ತಾನೆ. ಅವನು ಇಡೀ ಇದರಲ್ಲಿ ಮಾತುಗಳು ಬರ್ತದೆ ಅಂತ ಹೇಳ್ತಾನೆ. ಹ್ಞಾಂ. ಯಾರು ಮಾತ್ನಾಡುವವ? ಇದ್ರೆ ಅದು ದ್ವೈತ ಸಿದ್ಧಾಂತವೇ ಆಯ್ತು. ಹ. ಹ. ಹ.

ಅಹಂ – ಒಂದು ದೇಹವೇ ನಾನು ಎನ್ನುವುದು ಒಂದು ಅಹಂ. ಮತ್ತೊಂದು ಅಹಂ ಉಂಟು. ಅದು – ನಾನು ದೇಹವಲ್ಲ, ದೇಹದಲ್ಲಿರುವವನು ನಾನು ಎಂಬುದು. ಅದು ಮತ್ತೊಂದು ಅಹಂ. ಅದೂ ನಿಲ್ಲುವುದಿಲ್ಲ. ಆ ನಾನು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ಸ್ವತಂತ್ರನಾದ. ಅಂದ್ರೆ ಆತ್ಮನೇ ಆದ. ಅದು ನಿಜವಾದ ಸ್ವಾತಂತ್ರ್ಯ. ಅದೇ ವ್ಯಕ್ತಿ ಸ್ವಾತಂತ್ರ್ಯದ ಮಹತ್ವ. ಅದುವೇ ಮಾನವ ಜನ್ಮದ ಉದ್ದಿಶ್ಯ. ಪುನರ್ಜನ್ಮವಿಲ್ಲದ ಸ್ಥಿತಿ. ಹ್ಞಾಂ. ಹೀಗೆಲ್ಲ ಉಂಟು. ಆತ್ಮನಿಗೆ ಜನ್ಮವಿಲ್ಲ. ಆ ಜನ್ಮಕ್ಕೆ ಬರುವವನು ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ಪುನರ್ಜನ್ಮವಿಲ್ಲ. ಇದು ದೊಡ್ಡ ವಿಚಾರ. ಇದರ ವಿಚಾರಗಳನ್ನು ಸರಿಯಾಗಿ ಕೊಡದಿದ್ರೆ ಅನರ್ಥಕ್ಕೆ ಹೋದೀತು. ಬಹಳ ಕಷ್ಟ. ಒಂದೊಂದು, ಎರಡೆಂದು ಶಬ್ದಕ್ಕೆ ಗಂಟೆಗಟ್ಟಲೆ ವಿವರಿಸಬೇಕಾಕ್ತದೆ. ಹ್ಞಾಂ. ಗಂಟೆಗಟ್ಟಲೆ. ಅದು ಇನ್ನೊಬ್ಬನ ಮನಸ್ಸಿನ ಮೇಲೆ ಪರಿಣಾಮ ಬೀಳಬೇಕಲ್ಲ. ಅವನು ಹಾಗಿದ್ದವನು ಆದ್ರೆ ಮಾತ್ರ ಆಗಬಹುದು. ಅವನೂ ಕೂಡ ಅಂಥಾ ಒಂದು ಮನಸ್ಸನ್ನು ಪರಿವರ್ತನೆಗೊಳಿಸಿಕೊಂಡವನಾಗಿರ್ಬೇಕು. ಈ ಮನಸ್ಸು ಪರಿವರ್ತನೆ ಆಗ್ಬೇಕಲ್ಲ. ಸೋಽಹಂ ಭಾವನೆಯಿಂದ ಮನಸ್ಸು ಪರಿವರ್ತನೆ ಆಗ್ಬೇಕು. ಅವನೇ ನಾನು. ಈ ಮನಸ್ಸಿಗೆ ಅವನೇ ನಾನು ಅಂತ್ಹೇಳಿ ಬರ್ಬೇಕಲ್ಲ. ಇದು ಧ್ಯಾನಕ್ಕೆ ಸಂಬಂಧಪಟ್ಟದ್ದು. ಶಾಂತ ನೋಡು ಇಲ್ಲಿ ಬರ್ತದೆ ತ್ರಿಪುಟಿ ನಾಶಾಂತ ಹೇಳಿ, ಇಲ್ಲಿ ಬರ್ತದೆ. ದ್ವೈತದಲ್ಲಿ ಹೇಗೆ ಬರ್ತದೆ ಇದಕ್ಕೆ.

ಶಾಂತ – ದ್ವೈತ ಸಿದ್ಧಂತದ ಬಗ್ಗೆ ನನಗೆ ಗೊತ್ತಿಲ್ಲ ಅಜ್ಜ.

ಅಜ್ಜ – ಅದ್ವೈತದಲ್ಲಿ ಫಸ್ಟ್ ಬರ್ತದೆ ಅದು. ಅದು (ತ್ರಿಪುಟಿ) ನಾಶವಾದಾಗ ಅಂದ್ರೆ ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ಸ್ವತಂತ್ರನಾದ ಅವ. ಪರಮಾತ್ಮನು ಸ್ವತಂತ್ರನಲ್ಲ. ಹ್ಞಾಂ. ಇದು ನಮಗೆ ಮಾತ್ರ ಹೇಳ್ಲಿಕ್ಕೆ ಬರ್ತದೆ, ಪಬ್ಲಿಕ್ಕಾಗಿ ಹೇಳಬಹುದು. ಹ್ಞಾಂ.

ಒಬ್ಬರು – ಅದು ಹೇಗೆ?

ಅಜ್ಜ – ಅದು ಹಾಗೆ. ಹೇಗೆ ಉಂಟು ಅದು. ಅವನು ಮಾತ್ರ ಸ್ವತಂತ್ರ ಯಾರು? ಆತ್ಮ. ಆತ್ಮ ಮಾತ್ರ ಸ್ವತಂತ್ರ. ಪರಮಾತ್ಮನು ಸ್ವತಂತ್ರನಲ್ಲ.

ಒಬ್ಬರು – ಹೇಗೆ ಅವರಿಬ್ಬರಿಗೆ ವ್ಯತ್ಯಾಸವನ್ನು ನಾವು ತಿಳಿದುಕೊಳ್ಳೋದು?

ಅಜ್ಜ – ವ್ಯತ್ಯಾಸ ತಿಳ್ಕೊಳ್ಳಿಕ್ಕೆ ಮೊದಲು ಮನಸ್ಸು ಪರಿವರ್ತನೆ ಹೊಂದಬೇಕು. ತಿಳಿದುಕೊಳ್ಳಬೇಕೆಂಬ ಉಮೇದಿದ್ದವರಿಗೆ. ನಮ್ಮದು ಇದೇ ಕೆಲಸ ಉಂಟೀಗ. ಮನಸ್ಸು ಪರಿವರ್ತನೆ ಹೊಂದಬೇಕು. ಪರಿವರ್ತನೆ ಹೊಂದ್ಲಿಕ್ಕೆ ಪ್ರಾರಂಭದಿಂದ್ಲೆ ಹಂತ ಹಂತವಾಗಿ ಕೆಲಸ ಆಗಬೇಕು.

ಒಬ್ಬರು – ಏನು ಮಾಡಬೇಕು ಅಂತ ಹೇಳಿದ್ರೆ.

ಅಜ್ಜ – ಅದು ಹಾಗೆ ಹೇಳಿದ್ರೆ ಮಾಡ್ಲಿಕ್ಕೆ ಆಗ್ತದಾ ಅವನಲ್ಲೇ ಅದು ಉದಯ ಆಗ್ಬೇಕಲ್ಲ. ಅವನಿಗೇ ಕಾಣಬೇಕಲ್ಲ. ಅದು ಫಲಾಪೇಕ್ಷೆಯಿಂದ ಮಾಡುವಂಥಾದ್ದಲ್ಲ. ಕರ್ಮದಿಂದಲೇ ಪರಿವರ್ತನೆ, ನಿಷ್ಕಾಮಕರ್ಮ, ಶರಣಾಗತಿ, ಹೀಗೆಲ್ಲ ಉಂಟು.

ಒಬ್ಬರು – ಎರಡೂ ಜೊತೆ ಜೊತೆಗೆ ಆಗ್ಬೇಕ.

ಅಜ್ಜ – ಒಟ್ಟೊಟ್ಟಿಗೆ, ಒಟ್ಟೊಟ್ಟಿಗೆ, ಜೊತೆಜೊತೆಯಿಂದ ಆಗುವಂಥಾದ್ದು. ನಾಮಸ್ಮರಣೆ ಬೇಕು. ಜೊತೆ ಜೊತೆಗೆ ಬರ್ಬೇಕು. ಮೊದಲು ಪರಿವರ್ತನೆ ಆಗ್ಬೇಕು. ಆಮೇಲೆ ವಿಕಾಸ. ಇದು ಒಂದೇ ಜನ್ಮದಲ್ಲಿ ಆಗ್ಬೇಕು. ತಪ್ಪಿದ್ರೆ ಎರಡನೇ ಜನ್ಮದಲ್ಲಿ ಆಗ್ಬೇಕು.

ಒಬ್ಬರು – ಇದು ಜನ್ಮದಿಂದ ಜನ್ಮಕ್ಕೆ ಮುಂದುವರಿತಾ ಹೋಗ್ತದೆ.

ಅಜ್ಜ – ಮುಂದುವರಿಲಿಕ್ಕೆ ಸಾಧ್ಯವಿಲ್ಲ. ಆಮೇಲೆ ಸ್ಟಾಪ್ ಆಕ್ತದೆ ಅಲ್ಲಿ. ಪರಿವರ್ತನೆ ಹೊಂದಿ ವಿಕಾಸ ಹೊಂದಿದ ಮೇಲೆ ಮತ್ತೆ ಅಲ್ಲಿ ಬರ್ಲಿಕ್ಕೆ ಇಲ್ಲ.

ಒಬ್ಬರು – ಈಗ ಸಾಧನೆ ಮಾಡ್ತಾ ನಾವು, ನಮ್ಮ ದೇಹದ ಆಯುಸ್ಸು ಮುಗುದ್ರೆ ಮುಂದಕ್ಕೆ ಮುಂದುವರಿತದಾ.

ಅಜ್ಜ – ಮುಂದಿನ ಎರಡನೇ ಜನ್ಮಕ್ಕೆ ಬಂದಾಗ ಮುಂದುವರಿತದೆ. ಈ ನಮೂನೆ ಕರ್ಮದಲ್ಲಿ ಹೋದಾಗ ಎರಡನೇ ಜನ್ಮಕ್ಕೆ ಬಂದಾಗ ಅಂತಿಮ ಯಾವುದು? ನಿಷ್ಕಾಮಕರ್ಮ, ಶರಣಾಗತಿ, ಇನ್ನು ಎರಡು ಮೂರು ವಿಧಗಳುಂಟು. ಅದೇ ಮಾಡ್ತಾ, ಮಾಡ್ತಾ, ಮಾಡ್ತಾ ಈ ದೇಹವು ಬಿದ್ದುಹೋದಾಗ ಆ ಶಕ್ತಿ ಉಂಟಲ್ಲ, ಅದು ಪರಿವರ್ತನೆ ಆಯ್ತು. ಎರಡನೆ ವಿಕಾಸಕ್ಕಾಗಿ ಒಂದು ವಿಕಾಸ ಹೊಂದಿ ಸ್ವತಂತ್ರವಾಯ್ತು. ಮುಗಿಯಿತು.

ಒಬ್ಬರು – ಸಾವು ಮತ್ತು ಹುಟ್ಟಿನ ನಡುವೆ ಅದು ಏನಾಗಿರುತ್ತೆ.

ಅಜ್ಜ – ಸಾವು ಅಂದ್ರೆ ಯಾವ ಸಾವು ಅಂತ ನೀವು ಹೇಳೋದು.

ಒಬ್ಬರು – ದೇಹದ ನಾಶ.

ಅಜ್ಜ – ಅದು ಸಾವಲ್ಲ. ಅದನ್ನು ನಾವು ಒಪ್ಪೋದಿಲ್ಲ. ದೇಹ ನಾಶ ಆಯ್ತು. ಅದು ಸಾವಾದ್ರೆ, ಆ ಜೀವಾತ್ಮ ದೇಹದಿಂದ ಹೊರಟು ಹೋದ್ನಲ್ಲ. ಅವ ಸಾವಾದ್ರೆ ಹೊರಟು ಹೋಗೋದು ಹೇಗೆ. ಸಾವಾಗ್ಲಿಲ್ಲ ಅವನಿಗೆ. ಅದ್ರಿಂದ ಆ ಸಾವನ್ನು ನಾವು ಒಪ್ಪೋದಿಲ್ಲ.

ಒಬ್ಬರು – ಅಲ್ಲ, ಒಂದು ದೇಹವನ್ನು ಬಿಟ್ಟು "ವಾಸಾಂಸಿ ಜೀರ್ಣಾನಿ" ಅಂತ ಭಗವದ್ಗೀತೆಯಲ್ಲಿ ಹೇಳುವ ಹಾಗೆ, ಆ ಆತ್ಮವಸ್ತು ಒಂದು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನ ಪ್ರವೇಶ ಮಾಡ್ತದೆ ಅಂತ ಹೇಳ್ತಾರಲ್ಲ. ಮಧ್ಯದಲ್ಲಿ ಅದರ ಪರಿಸ್ಥಿತಿ.

ಅಜ್ಜ – ಮಧ್ಯದಲ್ಲಿ ಅದು ಬೇರೊಂದು ದೇಹ ಸಿಕ್ಕುವಲ್ಲಿವರೆಗೆ ಅದು ಹಾಗೇ ಇರ್ತದೆ. ಅಲ್ಲಿ.

ಒಬ್ಬರು – ಆವಾಗ ಅದರ ಬೆಳವಣಿಗೆ . . .

ಅಜ್ಜ – ಬೆಳವಣಿಗೆ ಏನೂ ಇಲ್ಲ ಅಲ್ಲಿ. ಬೆಳವಣಿಗೆಗೆ ದೇಹ ಸಿಕ್ಲೇ ಬೇಕು. ಅಷ್ಟುವರೆಗೆ ಅದು ಹಾಗೇ ಇರ್ಬೇಕು.

ಒಬ್ಬರು – ಅದು ಸ್ವತಂತ್ರವಾಗಿ ಅಲ್ಲಿ ಸಾಧನೆ ಮಾಡ್ಲಿಕ್ಕೆ ಆಗೋದಿಲ್ಲ.

ಅಜ್ಜ – ಏನು, ದೇಹವನ್ನು ಬಿಟ್ಟಮೇಲಾ?

ಒಬ್ಬರು – ಹೌದು.

ಅಜ್ಜ – ಇಲ್ಲ.

ಒಬ್ಬರು – ಅದು ಏನಾಗಿರುತ್ತೆ ಆವಾಗ.

ಅಜ್ಜ – ಏನು ಹಾಗೆ ಉಂಟು ಅಷ್ಟೆ. ಹೇಳ್ತದೆ. ಏನಾಗಿರ್ತದೆ ಎಂಬುದು ನಮಗೆ ಬೇಡ. ಯಾಕೆ ನಮಗೆ ಅದು.

ಒಬ್ಬರು – ಆ ಬೆಳವಣಿಗೆ ಅಂತ ಹೇಳಿದ್ರಲ್ಲಾ.

ಅಜ್ಜ – ಅದು ದೇಹದಲ್ಲಿ ಇರುವಾಗ ಆಗ್ಬೇಕು. ಯಾವುದಾದ್ರೂ ದೇಹವನ್ನು ಬಿಟ್ಟಮೇಲೆ ಇನ್ನೊಂದು ದೇಹಕ್ಕೆ ಅದು ಕಾಯ್ತಾ ಉಂಟು. ಈ ಸಂಸ್ಕಾರವನ್ನು ಮುಂದುವರಿಸ್ಲಿಕ್ಕೆ ಬೇಕಾಗಿ ದೇಹವನ್ನು ಅದು ಕಾಯ್ತಾ ಉಂಟು. ಎಲ್ಲಿ ಅದಕ್ಕೆ ಅನುಕೂಲವಾದ ದೇಹ ಸಿಕ್ತದೋ ಅಲ್ಲಿ ಪ್ರವೇಶ ಆಯ್ತು ಅದು. ಅಷ್ಟರವರೆಗೆ ತೊಳಲಾಡುತ್ತಾ ಉಂಟದು. ಹಾಗುಂಟು ವಿಚಾರ.

ಒಬ್ಬರು – ಅದಕ್ಕೆಷ್ಟು ಸಮಯ ಬೇಕಾದ್ರೂ ಆಗಬಹುದು.

ಅಜ್ಜ – ಅದು ಎಷ್ಟು ಸಮಯ ಅಂತ ಹೇಳ್ಲಿಕ್ಕೆ ಬರೋದಿಲ್ಲ. ಅದಕ್ಕೆ ಅನುಕೂಲವಾದ ವಾತಾವರಣ, ದೇಹ ಸಿಕ್ಕಬೇಕಲ್ಲ. ಕೂಡ್ಲೆ ಸಿಕ್ಕಿದ್ರೂ ಆಯ್ತು, ಸಿಕ್ಕ ಬೇಕಲ್ಲ.

ಒಬ್ಬರು – ಈ ಶ್ರಾದ್ಧಾದಿ ಕರ್ಮಗಳನ್ನೆಲ್ಲ ಮಾಡ್ತಾರಲ್ಲ.

ಅಜ್ಜ – ಹೌದು.

ಒಬ್ಬರು – ಅದು ಏನಾದ್ರೂ ಅದಕ್ಕೆ ಸೇರ್ತದಾ.

ಅಜ್ಜ – ಇವನ ಮನಸ್ಸಿನ ಸಂಕಲ್ಪಗಳ ಇವನ ಮನಸ್ಸಿಗೆ ಸಂಬಂಧಪಟ್ಟದ್ದು. ವೇದದ ಕರ್ಮಕಾಂಡದಲ್ಲಿ ಹೇಳುವ ಯಾವ ಕರ್ಮಗಳು ಬಂಧನಕ್ಕೆ ಸಂಬಂಧಪಟ್ಟದ್ದು. ಅಲ್ಲಿ ಕರ್ತೃತ್ವ ಉಂಟು. ಸಂಕಲ್ಪ ಉಂಟು. ಹೀಗೆಲ್ಲಾ ಉಂಟು . .

ಒಬ್ಬರು – ಅಜ್ಜ, ಈಶಾವಾಸ್ಯ ಉಪನಿಷತ್ತು ಇವನ್ನೆಲ್ಲ ಅವಿದ್ಯೆ ಅಂತ ಹೇಳಿಬಿಡ್ತದೆ. ಅವಿದ್ಯೆಯೂ ಮೃತ್ಯುಂ ತೀರ್ಥ್ವಾ ವಿದ್ಯಯಾಮೃತಮಶ್ನುತೇ . . . ಋಗ್ವೇದಾದಿಗಳೂ ಅವಿದ್ಯೆ ಅಂತ ಹೇಳಿಬಿಡ್ತದೆ.

ಅಜ್ಜ – ಹ. ಹ. ಹ. ಈಗ ನೀವೊಬ್ಬರು ನಮಗೆ ಸಿಕ್ಕಿದ್ದು ಹೀಗೆ ಹೇಳುವವರು. ಬೇರೆ ಯಾರೂ ಒಪ್ಪೋದಿಲ್ಲ ಅದನ್ನು.

ಒಬ್ಬರು – ಅಲ್ಲ ಉಪನಿಷತ್ತೆ ಹೇಳೋದ್ರಿಂದ ನಾವ್ಯಾರೂ ಏನೂ ಮಾಡ್ಲಿಕ್ಕಾಗಲ್ಲ ಅಜ್ಜ.

ಅಜ್ಜ – ಅದು ಸರಿ. ಆದ್ರೆ ಅದನ್ನು ಒಪ್ಪಿಕೊಳ್ಳುವಂತಹ ತಾಳ್ಮೆ ಬರಬೇಕಲ್ಲ ಮನುಷ್ಯನಿಗೆ ಅಲ್ವಾ, ಹ. ಹ. ಹ.

ಒಬ್ಬರು – ಒಪ್ಪಿಕೊಳ್ಳಲೇ ಬೇಕು. ವೇದ ಹೇಳಿದ್ಮೇಲೆ ನಾವೇನೂ ಮಾತಾದೋಕೆ ಆಗೋದಿಲ್ಲ.

ಅಜ್ಜ – ಅದೇ ವೇದದಲ್ಲಿ ಹೇಳುವ ಯವತ್ತೂ ಕರ್ಮಗಳು ಬಂಧನಕ್ಕೆ ಕಾರಣವಾದವುಗಳು. ಅಂದ್ರೆ ಸಕಾಮಕರ್ಮಗಳು. ಸಕಾಮಕರ್ಮ – ಅವು ಸುಖ–ದುಃಖ ಬಂಧನಕ್ಕೆ ಕಾರಣ. ನಿಷ್ಕಾಮಕರ್ಮದಲ್ಲಿ ಮಾತ್ರ . . . ಮುಂದೆ ಹೋಗ್ಬಹುದು. ಹಾಂ. ಗಂಟೆ ಎಷ್ಟಾಯಿತು. ಊಟಕ್ಕೆಲ್ಲ ವ್ಯವಸ್ಥೆ ಉಂಟಾ. ಹ. ಹ. ಸಾಕು ನಾವು ಈ ರೆಕಾರ್ಡ್ ಇಂಥಾದ್ದಕ್ಕೆಲ್ಲಾ ಹೆಚ್ಚಾಗಿ ಕೂಡಬಾರದೂಂತ್ಹೇಳಿ ಇಲ್ಲ. ಒಂದಲ್ಲಾ ಒಂದು ದಿನ ಬರ್ತದೆ. ಪಕ್ಕನೆ ಕೂಡುವುದಿಲ್ಲ. ಅಂತ್ಹೇಳಿ ಅಷ್ಟೆ. ಹ. ಹ. ಶ್ರಾದ್ಧದ ವಿಚಾರದಲ್ಲೇ ಮಾತನಾಡ್ಲಿಕ್ಕೆ ಇರುವಂಥಾದ್ದು. ಹ. ಹ. ನಮಗೆ ಇದೆಲ್ಲಾ ನಮಗೆ ಜೀವನದಲ್ಲಿ ನಡೆದಂಥದ್ದು. ಹಾಗಾಗಿ ನಮಗೆ ಮಾತಾಡ್ಲಿಕ್ಕೆ ಧೈರ್ಯ. ಇಲ್ಲವಾದೆ ಇಲ್ಲ. ನಮಗೆ ಉಪನಿಷತ್ತು ಗೊತ್ತಿಲ್ಲ. ಶಾಸ್ತ್ರ ಸಿದ್ಧಾಂತಗಳು ಗೊತ್ತಿಲ್ಲ. ಆದ್ರೆ ನಾವು ಹೇಳಿದ್ದು ಅದಕ್ಕೆ ಹೊಂದಾಣಿಕೆ ಬರ್ಲೇ

ಬೇಕೊಂತ್ಹೇಳಿ ನಮಗೆ ಕಾಣ್ತದೆ. ಉಪನಿಷತ್‌ಕಾರರಾದ್ರೂ, ಅವ್ರು ಅದನ್ನ ಅಂತರ್ಯದಲ್ಲಿ ಕಂಡುಕೊಂಡು ಅವನ್ನು ಹೇಳಿರುವಂಥಾದ್ದು. ಅವರು ಹೇಳಿದವರು ಇಂಥವರು ಅಂತ್ಹೇಳಿ ಅದರಲ್ಲಿ ಹೆಸ್ರಿಲ್ಲ. ಅಂದ್ರೆ ಕರ್ತೃತ್ವ ಇಲ್ಲ ಅವ್ರಿಗು. ಹ. ಹ. ಹೀಗೆಲ್ಲಾ ಉಂಟು. ನೀವು ಹೇಳಿದ್ರಿ ಸತ್ತವನಿಗೆ ಶ್ರಾದ್ಧ ಅಂತ್ಹೇಳಿ. ಆದ್ರೆ ನಮ್ಮ ಲೆಕ್ಕದಲ್ಲಿ ಅವ ಸಾಯಲೇ ಇಲ್ಲ ಅಂತ್ಹೇಳಿ. ಅವ ಜೀವಂತವಾಗಿ ಅಲ್ಲಿದ್ದಾನೆ. ಇವ ಶ್ರಾದ್ಧ ಮಾಡಿ ಸದ್ಗತಿ ಕೊಡುವುದಾದರೆ ಪ್ರತಿಯೊಬ್ಬರಿಗೂ ಮೋಕ್ಷ ಸಿಗಲೇ ಬೇಕು. ಸದ್ಗತಿ ಸಿಗಲೇ ಬೇಕು, ಇವನ ಶ್ರಾದ್ಧದಿಂದಾಗಿ ಅಲ್ವಾ.

ಒಬ್ಬರು – ಹೌದು.

ಅಜ್ಜ – ಶ್ರಾದ್ಧ ಮಾಡುವವರು ಸಾವಿರಗಟ್ಟಲೆ ಜನ ಇದ್ದಾರೆ. ಅಲ್ಲಿ ಹೋದವರಿಗೆಲ್ಲ ಮೋಕ್ಷ (ಸದ್ಗತಿ) ಸಿಕ್ಕಿರ್ಲೇ ಬೇಕು ಹಾಗಾದ್ರೆ, ಅಲ್ಲಾ. ಹ. ಹ. ಹಾಗಾದ್ರೆ ಅವರಿಗೆಲ್ಲ ಪುನರ್ಜನ್ಮ ಇಲ್ಲಾಂತ್ಹೇಳಿ ಆಯ್ತು.

ಒಬ್ಬರು – ಪುನರ್ಜನ್ಮ ಇಲ್ಲಾಂತ್ಹೇಳಿ ಆದ್ರೆ, ಮತ್ತೆ ಹುಟ್ಟುವವರಾರು?

ಅಜ್ಜ – ಅದೆ ಇರೋದು, ಶ್ರಾದ್ಧಕ್ಕೆ . . . . . ಹ. ಹ.

ಒಬ್ಬರು – ಎಷ್ಟು ಆತ್ಮಗಳು, ಎಷ್ಟು ಜೀವಾತ್ಮಗಳು, ಎಷ್ಟು ಪರಮಾತ್ಮಗಳು ಯಾರು ಹುಟ್ಟೋವ್ರು, ಯಾರು ಸಾಯೋವ್ರು, ಯಾರು ಶ್ರಾದ್ಧ ಮಾಡೋವ್ರು.

ಅಜ್ಜ – ಹೌದು, ಹೌದು. ಎಲ್ರಿಗೂ ಮೋಕ್ಷ ಡಬ್ಬಲ್ ಮೋಕ್ಷ ಸಿಗಬೇಕು. ಹ. ಹ. ಹ.

ಒಬ್ಬರು – ಒಂದು ಮೋಕ್ಷ ಸಿಗೋದು. ಜನಸಂಖ್ಯೆ ಕಡಿಮೆ ಆಗೋದು ಒಂದು ಮತ್ತೊಂದು ಒಂದು ಆತ್ಮ ಇನ್ನೊಂದು ದೇಹದೊಳಗೆ ಪ್ರವೇಶ ಮಾಡೋದಾದ್ರೆ. ಅಷ್ಟೇ ಆತ್ಮಗಳಿರಬೇಕಾಗಿತ್ತು. ಅಷ್ಟೇ ದೇಹಗಳಿರಬೇಕಾಗಿತ್ತು. ಜೀವಿಗಳು ಜಾಸ್ತಿ ಆಕ್ತಾ ಇದರೇ. ಅಂದ ಮೇಲೆ, ಮತ್ತೊಂದು ಹೊಸ ಸೃಷ್ಟಿ ಪ್ರಕ್ರಿಯೆ ನಡೀತಾ ಇರ್ಬಹುದು. ಈ ಪ್ರಶ್ನೆಗಳಿಗೆಲ್ಲ ಉತ್ತರ ಸಿಕ್ಕೋದೇ ಇಲ್ವೋ ಏನೋ.

ಅಜ್ಜ – ಸಿಕ್ತದೆ. ಆದರೆ ಅದ್ರಿಂದ ನಮಗೇನು? ನಮ್ಮ ಸಿದ್ಧಾಂತ ಹೀಗೆ ಉತ್ತರ ಉಂಟು. ಉತ್ತರ ಸಿಕ್ಕಿ ನಮಗೇನಾಗ್ಬೇಕೊಂತ್ಹೇಳಿ. ಉತ್ತರ ಉಂಟು. ಉತ್ತರ ಕೊಟ್ರೆ ಆಯ್ತು. ಅವನ ಮನಸ್ಸಿನ ಮೇಲೆ ಪರಿಣಾಮ ಆಯ್ತು. ಅವನು ಉತ್ತರವನ್ನು ಕಂಡುಕೊಳ್ಳುವ ದಾರಿಯನ್ನು ನಾವು ಹೇಳುವಂಥಾದ್ದು. ಉತ್ತರ ಅವನಿಗೇ ಹೋಳಿಬೇಕದು. ಮತ್ತೆ ಅವನ ವಿಚಾರಗಳೇ ಬೇರೆ. ಶಾಂತಾ ಮೊನ್ನೆ ಅಲ್ಲೊಂದು ಕಡೆ ಪ್ರಶ್ನೆ ಬಂತು ಹೇಳ್ಬೇಕಾ? ಹಾಂ. ದೇವರಿದ್ದಾನಾ ಅಂತ್ಹೇಳಿ ಪ್ರಶ್ನೆ ಬಂತು. ಆಂ. ದೇವರ ಮೇಲೆ ನಮಗೆ ನಂಬಿಕೆ ವಿಶ್ವಾಸ ಇಲ್ಲ. ನಾವು ನಂಬುವುದಿಲ್ಲ ಅಂತ್ಹೇಳಿ. ಬಿಡುವ ಹೋಗ್ಲಿ ಬಿಡುವ ನಮಗೇನು. ಅವನು ನಂಬಬೇಕೊಂತ್ಹೇಳಿ ಯಾರಾದ್ರು ಅವನಿಗೆ ಒತ್ತಾಯ ಮಾಡ್ತಾರಾ. ಅಲ್ವಾ. ಆದರೆ ಸರಿಯಾದ ಉತ್ತರ ಅದಲ್ಲ. ನಾವು ಅವನನ್ನು ಕೇಳಿ ಆಯ್ತು. ನೀವು ಹೇಳ್ತೀರಿ ದೇವರಿಲ್ಲ ಅಂತ್ಹೇಳಿ. ಸರಿ ನೀವಿದ್ದೀಯಲ್ಲ 'ಇದ್ದೇನೆ!' ಹಾ ಬಿಡು ಸಾಕು. ಇಷ್ಟೇ ಸಾಕು. ನಿನ್ನನ್ನು ನೀನು ತಿಳಿ. ಆಗ ದೇವರ ವಿಚಾರ ನಿನಗೆ ಗೊತ್ತಾಕ್ತದೆ ಅಂತ್ಹೇಳಿ ಆಯ್ತು. ಪೇಪರೌಟ್ ಆಯ್ತು. ಅಲ್ವಾ ಶಾಂತಾ ನೀನಿದ್ದೀಯಲ್ಲಾ ಆವತ್ತು.

ಶಾಂತಾ – ಹೌದು. ನೀವು ಹೇಳಿದ್ರಿ ದೇವರು ಆಮೇಲೆ. ನಾನು ಮೊದಲು ಅಂತ್ಹೇಳಿ.

ಅಜ್ಜ – ನಾನು ಅಂದ್ರೆ ಈ ನಾನು ಅಲ್ಲ. ಅಹಂಕಾರದ ನಾನು ಅಲ್ಲ. ಮೂಲ ನಾನು. ಅದರ ಅಸ್ತಿತ್ತ್ವವು ಹೋದಾಗ, ನೋಡಿ, ಆ ನಾನು ಉಂಟು. ಆ ನಾನು ಯಾರು? ಎಂಬ ಶೋಧನೆಯಿಂದ ತನ್ನ ಅಸ್ತಿತ್ತ್ವವನ್ನು ಕಳಕೊಂಡಾಗ ನೋಡಿ ಅಲ್ಲಿ ನಾನೂ ಇಲ್ಲ, ನೀನೂ ಇಲ್ಲ. ಇದ್ಯಾವುದು – ಮೂಲ ನಾನು, ಇದು ಹೇಳುವಂಥಾದ್ದು. ಇದೇ ನಮಗೆ ಮಾತಾಡ್ಲಿಕ್ಕೆ ಇಷ್ಟ ಇಲ್ಲದಿರುವಂಥಾದ್ದು. ಇದೇ ಸನ್ನಿವೇಶಗಳಲ್ಲಿ ಅಲ್ವಾ ಅನಿಲ್.

ಅನಿಲ್ – ಹೌದಜ್ಜ. ನನಗೆ ದೇವರೆ ಮೇಲೆ ನಂಬಿಕೆ ಇಲ್ಲ ಅಂತ್ಹೇಳಿ ಹೇಳಿದ್ರಜ್ಜ.

ಅಜ್ಜ – ಬೇಡ ಹೋಗ್ಲಿ.

ಅನಿಲ್ – ಹೌದಜ್ಜ. ನನ್ನ ಮೇಲೆ ನಿನಗೆ ನಂಬುಕೆ ಇದಿಯಾ ಅಂತ ಕೇಳಿದ್ರಿ.

ಅಜ್ಜ – ಹ. ಹ. ಹಾಂ. ಉಂಟು ಅಂತ ಹೇಳಿದ. ಸಾಕು, ಅದೊಂದೇ ಸಾಕು ನಮಗೆ. ನಿನ್ನ ಮೇಲೆ ನಿನಗೆ ನಂಬಿಕೆ ಉಂಟಲ್ಲ. ನೀನು ಯಾರು ಅಂತ್ಹೇಳಿ ನೀನು ಶೋಧನೆ ಮಾಡು ಅಂತ ಹೇಳಿ ಆಯ್ತು. ಹ. ಹ. ಬಂಧನಕ್ಕು ಬಿಡುಗಡೆಗು ಮನಸ್ಸೇ ಕಾರಣ. ಅಂದ್ರೆ ಸೂಕ್ಷ್ಮದೇಹ ಕಾರಣ. ಒಗಟಾಗಿ ಹೇಳುವಂಥಾದ್ದು. ಅವನು ಪುನಃ ಅವನ (ಭಗವಂತನ) ಅನುಗ್ರಹದಿಂದ, ಪರಮಾತ್ಮನ ಅನುಗ್ರಹ ಬಿತ್ತು. ಅವ ಪುನಃ ಬರ್ಲೇ ಬೇಕು. ಬಂದಾಗ ವಿಕಾಸವಾಯ್ತು. ಅದನ್ನ ಈ ಮನಸ್ಸು ಹೇಳ್ತದೆ ದೇಹ ತಾನಲ್ಲ ಅಂತ್ಹೇಳಿ. ನಮಗೆ ಶಾಸ್ತ್ರದ ಅನುಭವವಿಲ್ಲ. ನಮಗೆ ಆದ ಅನುಭವವನ್ನು ನಾವು ಹೇಳ್ಬೇಕಲ್ವ.

ಶಾಂತಾ – ಅಜ್ಜ, ನಿಮಗೆ ಶಾಸ್ತ್ರದ ಅನುಭವ ಇಲ್ಲದೇ ಇದ್ರು ಅಲ್ಲಿಗೆ ಹೋಗಿ ಬಂದಿದ್ದೀರಲ್ಲ, ಅಲ್ಲಿ ನೋಡಿಲ್ವಾ ನೀವು.

ಅಜ್ಜ – ಪುನರ್ಜನ್ಮ ಸಿದ್ಧಾಂತ ಪ್ರಕಾರ ಪುನಃ ಬರ್ಲೇ ಬೇಕು.

ಶಾಂತಾ – ಹೌದಜ್ಜ, ನೀವು ಅಲ್ಲಿದ್ದಾಗ ಅಲ್ಲಿ ಯಾರನ್ನು ವಿಕಾಸ ಹೊಂದುವವರನ್ನು ನೋಡಲಿಲ್ವಾ ನೀವು. ಅಲ್ಲೇ ಇದ್ದು ವಿಕಾಸ ಹೊಂದುವಂಥ ಸಾಧ್ಯತೆ ಇದೆ ಅನ್ನೋದು ನಿಮಗೆ ಅಲ್ಲಿ ಹೋದಾಗ ಗೊತ್ತಾಗಲಿಲ್ವಾ.

ಅಜ್ಜ – ಅಲ್ಲಿ ಯಾವ ಅನುಭವವೂ ಇಲ್ಲ. ಅಲ್ಲ ಇರ್ಬಹುದಷ್ಟೇ ಹೊರತು, ಅಂದ್ರೆ ಅದು ಅನುಭವಾತೀತವಾದ ವಿಚಾರಗಳು. ಯಾಕೇಂದ್ರೆ ಅಲ್ಲಿ ಮನಸ್ಸಿಲ್ಲ.

ಶಾಂತಾ – ಹಾಗಾದ್ರೆ ನೀವು ಅಲ್ಲಿ ಏನನ್ನೂ ನೋಡಲಿಲ್ವಾ.

ಅಜ್ಜ – ಆಂ.

ಶಾಂತಾ – ಏನನ್ನೂ ನೋಡಲೇ ಇಲ್ವಾ.

ಅಜ್ಜ – ಎಲ್ಲಿ.

ಶಾಂತಾ – ಆ ಮೂರನೇ ವಲಯದಲ್ಲಿ.

ಅಜ್ಜ – ನೋಡುವ ಯಾರು.

ಶಾಂತಾ – ಆ ಕಾರಣಶರೀರ ಇತ್ತಲ್ಲ, ಅದು ಅಲ್ಲಿ.

ಅಜ್ಜ – ಅದೂ ಬರೀ ಇತ್ತು ಅಲ್ಲಿ.

ಶಾಂತಾ – ಹಾಗಾದ್ರೆ ಅಲ್ಲಿ ನಿಮಗೆ ಏನೂ ಕಾಣಲಿಲ್ವಾ.

ಅಜ್ಜ – ಇಲ್ಲ.

ಶಾಂತಾ – ಹಾಗಾದ್ರೆ ಅಲ್ಲಿಯ ಕೆಲವು ವಿಷಯಗಳನ್ನು ಹೇಳಿದ್ದೀರಲ್ಲ.

ಅಜ್ಜ – ಅದು ಯಾವುದು ಕಂಡದ್ದು ಸುಪ್ತ ಪ್ರಜ್ಞೆ ಇಲ್ಲಿ ಇತ್ತಲ್ಲ. ಈ ಸುಪ್ತ ಪ್ರಜ್ಞೆ ಜಾಗೃತವಾದಾಗ ಇದಕ್ಕೆ ಅದೆಲ್ಲ ಕಂಡದ್ದು.

ಶಾಂತಾ – ಇದಕ್ಕೆ (ಸುಪ್ತ ಪ್ರಜ್ಞೆ) ಅದೆಲ್ಲ ಕಂಡ ಮೇಲೆ ಆ ವಿಷಯವು ಕಂಡಿರಬೇಕಲ್ಲ. ಅಲ್ಲಿ ವಿಕಾಸ ಹೊಂದಲಿಕ್ಕೆ ಸಾಧ್ಯ ಇದೆಯೋ ಇಲ್ಲವೋ ಎನ್ನುವುದು ಕಂಡಿರಬೇಕಲ್ಲ.

ಅಜ್ಜ – ಇದು ವಿಚಾರ ವಿಮರ್ಶೆಗೆ ಬಿಟ್ಟದ್ದು. ವಿಕಾಸಕ್ಕೆ ಇಲ್ಲಿಗೆ ಬರ್ಲೇ ಬೇಕು. ನಮ್ಮ ಸಿದ್ಧಂತದ ಪ್ರಕಾರ. ಅಂದರೆ ಪರಿವರ್ತನೆ ಹೊಂದಿದ ಜೀವಾತ್ಮರಿಗೂ ಕೂಡ ಜನ್ಮ ಉಂಟು ಅಂತ್ಹೇಳಿ ಆಯ್ತು. ಅಲ್ಲಿ ಹೋದ ಮೇಲೂ ಅದು ಪುನಃ ಬರ್ಲೇ ಬೇಕು. ಹಾಗೇ ಕಾಣ್ತದೆ ನಮಗೆ. ಜನ್ಮ ಬಂಧನದಿಂದ ಬಿಡುಗಡೆ ಇಲ್ಲಿಯೇ ಆಗ್ಬೇಕು ಅಂತ್ಹೇಳಿ ಕಾಣ್ತದೆ ನಮಗೆ. ಅದೇ ಜೀವನ್ಮುಕ್ತಿ. ಜೀವವಲ್ಲದ್ದೇ ಆಗುವಂಥಾದ್ದು. ದೇಹದಲ್ಲಿದ್ದೇ ಆಗುವಂಥಾದ್ದು. ಅಲ್ಲಿ ಆ ವಲಯ ಪರಮಾತ್ಮ ಹಾಗೆ ಇರಬಹುದು. ಐಕ್ಯತೆ ಹೊಂದಿದ ಶಕ್ತಿಗಳುಂಟಲ್ಲಿ. ಅದು ಹಾಗೇ ಇರಬಹುದು. ಅದು ಇಲ್ಲಿಗೆ ಪುನಃ ಬರ್ಬೇಕು ಅಂತ್ಹೇಳಿ ಇಲ್ಲ. ಅದು ಅವನಿಗೆ ಬಿಟ್ಟ ವಿಚಾರ.

ಶಾಂತಾ – ಪರಮಾತ್ಮನ ಹಾಗೆ ಆದವರು ಇದ್ದಾರಲ್ಲಾ ಅವರು ಬರ್ತಾರಾ.

ಅಜ್ಜ – ಅವನ ಹಾಗೆ ಆದವರು ಬರ್ತಾರೆ.

ಶಾಂತಾ – ಅಂಥವರಲ್ಲಿ ನೀವೊಬ್ಬರು.

ಅಜ್ಜ – ಆಂ.

ಶಾಂತಾ – ನೀವೂ ಒಬ್ಬರು.

ಅಜ್ಜ – ಉಮ್ಮ.

ಶಾಂತಾ – ಹೇಳಿದ್ರಿ ಈಗ. ಈಗ ಹೇಳಿದ್ರಿ.

ಅಜ್ಜ – ಹ. ಹ. ಹ.

ಶಾಂತಾ – ಹಾಗೆ ಪರಿವರ್ತನೆ ಹೊಂದಿ ಅವನ ಹಾಗೆ ಆದವರು ಇದ್ದಾರಲ್ಲಾ ಅವರಿಗೂ ಪರಮಾತ್ಮನಿಗೂ ಏನು ವ್ಯತ್ಯಾಸ ಅಜ್ಜ.

ಅಜ್ಜ – ವ್ಯತ್ಯಾಸ ಸ್ವಲ್ಪ ಮಟ್ಟಿಗೆ ಉಂಟು.

ಶಾಂತಾ – ಯಾವುದರಲ್ಲಿ.

ಅಜ್ಜ – ಅವ ಸೃಷ್ಟಿಕರ್ತ. ಇವನು ಸೃಷ್ಟಿಕರ್ತನಲ್ಲ ಯಾಕೇಂದ್ರೆ ಇವನಿಗೆ ನೋಡಿ, ಆತ್ಮ ವಿಚಾರಕ್ಕೆ ಹೋಕ್ತದೆ.

ಶಾಂತಾ – ಅದೊಂದು ಬಿಟ್ಟು ಬೇರೆ ಎಲ್ಲಾ ರೀತಿಯಿಂದಲೂ ಒಂದೆ?

ಅಜ್ಜ – ಪರಮಾತ್ಮಾ ಅಂದ್ರೆ – ಅದು ತುಂಬಾ ವಿಚಾರಕ್ಕೆ ಒಳಪಟ್ಟದ್ದಪ್ಪಾ.

ಶಾಂತಾ – ಅದನ್ನೇ ಹೇಳಿ.

ಅಜ್ಜ – ಅದನ್ನ ಹೇಳ್ಲಿಕ್ಕೆ ಆಗೋದಿಲ್ಲ.

ಶಾಂತಾ – ಅವ ಸೃಷ್ಟಿಕರ್ತ, ಇವ ಸೃಷ್ಟಿಕರ್ತನಲ್ಲ. ಅಷ್ಟೇ ವ್ಯತ್ಯಾಸವಾ.

ಅಜ್ಜ – ಹೌದು. ಅಷ್ಟೇ ವ್ಯತ್ಯಾಸ.

ಶಾಂತಾ – ಉಳಿದದ್ದು ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವನಿಯಾಮಕತ್ವ, ಇದೆಲ್ಲಾ.

ಅಜ್ಜ – ಅಯ್ಯೋ, ಇವ ಮುಂದೆ ಹೋಗಿಬಿಟ್ಟಾಪ್ಪ.

ಶಾಂತಾ – ಹೋದ ಮೇಲಿನ ಮಾತಲ್ಲ ಅಜ್ಜ, ಹೋಗುವಲ್ಲಿವರೆಗಿನದ್ದು ಹೇಳಿ. ಪರಿವರ್ತನೆ ಹೊಂದಿ ಪರಮಾತ್ಮನ ಹಾಗೆ ಆಗಿದ್ದಾನೆ. ಆಗ ಹೇಗೆ ಎಂಬುದನ್ನು ಹೇಳಿ. ಆ ಸ್ಥಿಯಲ್ಲಿನ ವ್ಯತ್ಯಾಸ ಹೇಳಿ.

ಅಜ್ಜ – ಬರೀ ಸಾಕ್ಷಿ ಮಾತ್ರ ಇಲ್ಲಿ. ಅದು ಯಾರು ಹೇಳೋದು. ಇಲ್ಲಿ ಕರ್ತೃಸ್ಥಾನ ಇಲ್ಲವಲ್ಲ.

ಶಾಂತಾ – ಬಂದವರೆ. ನಾವು ಬಂದಿದ್ದೇವೆ ಅಂತ ಹೇಳ್ತಾರಲ್ಲ. ಅವರೇ ಹೇಳಲಿ.

ಅಜ್ಜ – ಆ ಸಮಯದಲ್ಲಿ ಎಲ್ಲ ಇತ್ತದು. ಆಮೇಲೆ ಆಮೇಲೆ ಅದನ್ನೆ ಇಟ್ಟುಕೊಂಡು ಇಟ್ಟುಕೊಂಡಿರ್ಲಿಕ್ಕೆ ಆಗೋದಿಲ್ಲ. ಇಲ್ಲಿ ಆದದ್ದನ್ನ ಹೇಳಬೇಕು ಅಷ್ಟೇ ಹೊರತು ಹೊಸದಾಗಿ ಹೇಳ್ಲಿಕ್ಕೆ ಽ ಽ ಽ

ಶಾಂತಾ – ಇಲ್ಲಿಂದ ಮಾತುಗಳು ಬರ್ತದಲ್ಲ ಅಜ್ಜ, ಹಾಗೆ ಮಾತುಗಳು ಬರ್ಲಿ ಅಂತ.

ಅಜ್ಜ – ಉ ಹೂ. ಅದನ್ನು ಅದಕ್ಕೆ ಬಿಡಬೇಕು. ಬಂದರೆ ಬಂತು. ಸಂದರ್ಭಾನುಸಾರ ಬರ್ಬೇಕಷ್ಟೆ. ಈ ಬರ್ಲಿಕ್ಕಿಲ್ಲ. ಸನ್ನಿವೇಶ ಬರ್ಬೇಕಲ್ಲ ಅದಕ್ಕೆ.

ಶಾಂತಾ – ಇಲ್ಲದಿದ್ರೆ ಮಾತುಗಳು ಬರೋದಿಲ್ವ.

ಅಜ್ಜ – ಉ ಹೂ. ಬರೋದಿಲ್ಲ.

ಶಾಂತಾ – ಅಥವ ಕೇಳುವವರಲ್ಲಿ ಅರ್ಹತೆ ಇಲ್ಲದ್ದರಿಂದ ಬರೋದಿಲ್ವ.

ಅಜ್ಜ – ಆ ಕೇಳುವವರಲ್ಲಿ, ಆ ಕೇಳುವವರು ಅದನ್ನು . . . . ಇಟ್ಟುಕೊಳ್ಳಬೇಕಲ್ಲ. ಆಂ. ಅಲ್ಲಿಗೆ ಟಚ್ಚೇ ಆಗದಿದ್ರೆ, ನೋಡು, ಇವ ಹೇಳ್ತಾನಾ. ಉಪನ್ಯಾಸ ಭಾಷಣವೇ ಆಯ್ತಷ್ಟೆ. ಹೇಳ್ತಾ ಹೋದ್ರೆ ಇದು ಉಪನ್ಯಾಸ ಭಾಷಣಕ್ಕೆ ಸಂಬಂಧಪಟ್ಟ ವಿಚಾರ ಅಲ್ಲ. ಅದಕ್ಕೆ ನಾವು ಅವರಿಗೆ ಹೇಳಿದ್ದು "ಇದು ಮಾರಾಟಕ್ಕೆ ಸಿಗುವ ವಸ್ತುವಲ್ಲ" ಅಂತ್ಹೇಳಿ. ಯಾರವರು. ಆಗ ಎರಡು ಜನ ಬಂದ್ರಲ್ಲ ಅವರು. ಇದು ಉಂಟು ಅಂತ್ಹೇಳಿ ಆದ್ರೆ ಅಂಥವರು ಸಿಕ್ಕಲೇ ಬೇಕಲ್ಲ.

ಶಾಂತಾ – ಅಂಥ ಅರ್ಹತೆ ಇರುವವರು ಸಿಕ್ಕೇ ಸಿಕ್ತಾರೆ.

ಅಜ್ಜ – ಓ, ಓಹೋ.

ಶಾಂತಾ – ಮತ್ತೆ ಇನ್ನೂ ಒಬ್ಬರೂ ಕಾಣ್ತಾನೇ ಇಲ್ಲ. ಇನ್ನೂ ಸಿಕ್ಕೇ ಇಲ್ಲ.

ಅಜ್ಜ – ಉಮ್ಮ. ನಮ್ಮದು ನಮಗೆ ಗೊತ್ತಾಕ್ತದಾ. ನಮ್ಮ ಮುಖ ನಮಗೆ ಕಾಣ್ತದಾ. ಕಾಣೋದಿಲ್ಲ.

ಶಾಂತಾ – ಅಲ್ಲ ಅಜ್ಜ . . . .

ಅಜ್ಜ – ನಾವು ಹೇಳುವಂಥ ಮಾತುಗಳನ್ನ ಇನ್ನೂ ಇನ್ನೂ ಚನ್ನಾಗಿ ಅರ್ಥಮಾಡಿಕೊಳ್ಬೇಕು. ಹೊತ್ತಾಗ್ಲಿಲ್ವ. ಇಲ್ಲಿ ಮಾತು ಬರ್ತದೆ ಅಂತ್ಹೇಳಿ. ಇಂಥವನು ಮಾತಾಡ್ತಾನೆ ಅಂತ್ಹೇಳಿ ಇದುವರೆಗೆ ಹೇಳಿದ್ದಿಲ್ಲ. ಮಾತುಗಳು ಬರ್ತದೆ.

ಹೌದು. ಯಾರು ಹೇಳಿದ್ದು ಮಾತುಗಳನ್ನು. ಹೇಳುವವ ಯಾರು? ಆ ಹೇಳುವವ ತನ್ನ ಅಸ್ತಿತ್ವವನ್ನು ಕಳಕೊಂಡಾಗ . . . ನೋಡಿ ಅದೇ ಇರೋದು ಕರ್ತೃಸ್ಥಾನ ಇಲ್ಲ ಅಂತ್ಹೇಳಿ. ಅದೇ ತನ್ನ ಜೀವಮಾನ ಕಾಲದಲ್ಲಿ ಆದ ಸಂಪೂರ್ಣ ಕೃತಿಗಳನ್ನು ನೋಡಿದಾಗ ಗೊತ್ತಾಗಬಹುದು. ಅಷ್ಟೆ. ಈ ದೇಹಕ್ಕೆ ಒಂದು ತಾಯಿ ಇತ್ತಲ್ವಾ. ಆಂ, ಅದು ಹೋಯ್ತಲ್ಲಾ. ಅದಕ್ಕೆ ಉತ್ತರಕ್ರಿಯೆ ಆಗ್ಬೇಕು ಅಂತ್ಹೇಳಿ ಇತ್ತಲ್ವಾ. ಉತ್ತರಕ್ರಿಯೆ ಆಗ್ಲಿಲ್ವಲ್ಲಾ ಯಾಕೆ? ಕರ್ತೃಸ್ಥಾನ ಇಲ್ಲ. ಮಾಡುವವ ಇಲ್ಲಿ ಅಲ್ಲಿ ಆಂ ಮಾಡುವವನೂ ಇಲ್ಲ ಅದು ಸಾಯಲೂ ಇಲ್ಲ. ದೇಹ ಸತ್ತಿತು ಅಲ್ಲಿ. ಅದು ಸಾಯ್ತು.

ಶಾಂತಾ – ಮತ್ತೆ ಏನಾಯ್ತು ಅದು.

ಅಜ್ಜ – ಅದು ಏನೂ ಆಗಿರ್ಬಹುದು.

ಶಾಂತಾ – ಅದೇನಾಗಿದೆ ಅದು. ಅದು ಸಾಯಲಿಲ್ಲ ಅಂತ್ಹೇಳಬೇಕಾದ್ರೆ ಅದೇನಾಗಿದೆ ಅಂತ ಗೊತ್ತಿರಲೇ ಬೇಕಲ್ಲಾ.

ಅಜ್ಜ – ಗೊತ್ತಿರಲೇ ಬೇಕು.

ಶಾಂತಾ – ಹಾಗಾದ್ರೆ ಅದೇನಾಗಿದೆ.

ಅಜ್ಜ – ಅದನ್ನು ಮೊದಲೇ ಹೇಳಿದ್ದಿರಬಹುದು. ಸಣ್ಣ ನದಿಯು ದೊಡ್ಡ ನದಿಯೊಟ್ಟಿಗೆ ಹೋಗಿ (ಸಾಗರ) ಅದರ ಹಾಗೆ ಅದು ಆಗಿರಬಹುದು.

ಶಾಂತಾ – ಅದೇ ರೀತಿ.

ಅಜ್ಜ – ಅದೇ ರೀತಿಯಲ್ಲಿ ಘಟಾಕಾಶ ಅಂತ್ಹೇಳಿ ಅವರು ಹೇಳಿದ್ರಲ್ಲ, ಮತ್ತಿನದನ್ನೆಲ್ಲಾ ನೀವು ಅರ್ಥಮಾಡಿಕೊಳ್ಳಬಹುದು.

ಶಾಂತಾ – ಅಲ್ಲ ಅಜ್ಜಾ, ಅದೇ ರೀತಿಯಲ್ಲಿ ಆ ಜೀವಾತ್ಮ ಏನಾಯಿತು.

ಅಜ್ಜ – ಇಷ್ಟಿಷ್ಟು ಹೇಳುವಾಗ ನೋಡಿ, ಅಲ್ಲಿ ವಿಚಾರವಂತರು ಅವರು ಅದನ್ನು ಅರ್ಥ ಮಾಡಬೇಕು.

ಶಾಂತಾ – ಅಲ್ಲ ಅಜ್ಜಾ, ಸಣ್ಣ ನದಿಯು ಹೋಗಿ ದೊಡ್ಡ ನದಿಯ . . .

ಅಜ್ಜ – ಅಷ್ಟೇ ಹೇಳ್ತದೆ ನಾವು. ಸಣ್ಣ ನದಿಯು ದೊಡ್ಡ ನದಿಯನ್ನು ಸೇರಿ, ದೊಡ್ಡ ನದಿಯೊಟ್ಟಿಗೆ ಸಮುದ್ರವನ್ನು ಸೇರ್ತದೆ ನೋಡಿ. ಕುಮಾರಧಾರೆ ನೇತ್ರಾವತಿ ಜೊತೆ ಉಪ್ಪಿನಂಗಡಿಯಲ್ಲಿ ಸೇರಿ ನೋಡಿ, ಮತ್ತೆ ಅಲ್ಲಿಂದ ಕುಮಾರಧಾರೆಯ ಹೆಸರೇ ಇಲ್ಲ. ಏನಾಯಿತದು.

ಶಾಂತಾ – ನೇತ್ರಾವತಿ ಆಯ್ತು.

ಅಜ್ಜ – ನೇತ್ರಾವತಿಯಲ್ಲಿ ಒಂದೇ ಆಯ್ತು. ಅದೆ ಸಣ್ಣ ನದಿಯು ದೊಡ್ಡ ನದಿಯೊಡನೆ ಸೇರಿ . . . . .

ಶಾಂತಾ – ಹೌದು ಹಾಗೆ ಆ ಜೀವಾತ್ಮ ಏನಾಯ್ತು ಅಂತ ಅರ್ಥ ಮಾಡ್ಕೋಬೇಕು. ಯಾವುದನ್ನು ಹೋಗಿ ಸೇರಿತು ಅಂತ ಅರ್ಥಮಾಡ್ಕೋಬೇಕು.

ಅಜ್ಜ – ಅದು ಹಾಗೇ ಹೇಳಬೇಕಷ್ಟೆ. ಆಂ. ಊಟಕ್ಕೆ ಆಯ್ತಾ, ಏಳಿ.

*****